4:59 2.69 KB/s 4G+ 16%

Bapuji Educational Association (Regd.)
**Bapuji Institute of Engineering and Technology, Davangere-577004**
(An Autonomous Institute Affiliated to Visvesvaraya Technological University, Belagavi, Karnataka)
( Approved by AICTE, New-Delhi and Accredited by NBA and NAAC)

# Invitation

# NIRMANA 5.0

**In House Project Exhibition-2025**

## NATIONAL TECHNOLOGY DAY-2025

**CHIEF GUEST**
**Sri. Pooran Prasad Rajanna**
Founder CEO of 1Page

**GUEST OF HONOR**
**Prof. Y Vrushabhendrappa**
Director

**PRESIDENT**
**Dr. H B Aravind**
Principal

**CONVENER**
**Dr. A G Shankara Murthy**
Professor, Mechanical Dept.

***Date : 17th May 2025***
***Time : 10.00 AM***

***SKILL DEVELOPMENT CENTER, BIET, Davangere***

*All are Cordially Invited*

Design Elements Text Gallery Brand Uplo

Bapuji Educational Association (Regd.)

# BAPUJI INSTITUTE OF ENGINEERING AND TECHNOLOGY, DAVANGERE-577004

(An Autonomous Institute Affiliated to Visvesvaraya Technological University , Belagavi, Karnataka)

( Approved by AICTE, New-Delhi and Accredited by NBA and NAAC)

## NIRMANA 5.0

**In House Project Exhibition-2025**

## NATIONAL TECHNOLOGY DAY-2025



**Chief Guest:**

**Sri.Pooran Prasad Rajanna**

Founder CEO of 1Page



**Convener**

**Dr. A G Shankara Murthy**

Professor, Mechanical Dept.



**Guest of Honor**

**Prof. Y Vrushabhendrappa**

Director



**President**

**Dr. H B Aravind**

Principal

*Date : 17 th May 2025*

**All are Cordially Invited**

*Time : 10.00 AM*

**VENUE: SKILL DEVELOPMENT CENTER, BIET,DAVANGERE**

# ಬಿಐಇಟಿಯಲ್ಲಿ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ

ದಾವಣಗೆರೆ: ಬಿಐಇಟಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ ನಿರ್ಮಾಣ 5.0 ಯೋಜನಾ ಪ್ರದರ್ಶನ–2025 ಮತ್ತು ರಾಷ್ಟ್ರೀಯ ತಂತ್ರಜ್ಞಾನ ದಿನ–2025 ಆಚರಣೆಯನ್ನು ಮೇ.17ರಂದು ಬೆಳಿಗ್ಗೆ 10 ಗಂಟೆಗೆ ಕಾಲೇಜು ಆವರಣದಲ್ಲಿರುವ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂತಿಮ ವರ್ಷದ ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಈ ವೇದಿಕೆಯನ್ನು ಕಲ್ಪಿಸಲಾಗಿದೆ. ಸುಮಾರು 9 ವಿಭಾಗಗಳ 60 ವಿದ್ಯಾರ್ಥಿ ಯೋಜನೆಗಳನ್ನು ಪ್ರದರ್ಶಿಸಲಾಗುವದು, 'ಅತ್ಯುತ್ತಮ ನವೀನ ಯೋಜನೆ' 'ಸಾಮಾಜಿಕ ಕಳಕಳಿಯಿರುವ ಅತ್ಯತ್ತಮ ಯೋಜನೆ' ಮತ್ತು 'ವಿಭಾಗದ ಅತ್ಯುತ್ತಮ ಯೋಜನೆ' ಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ.

ಬೆಂಗಳೂರು 1 ಪೇಜ್ ಸಂಸ್ಥಾಪಕರು, ಹಳೇಯ ವಿದ್ಯಾರ್ಥಿಯಾದ ಪೂರಣ ಪ್ರಸಾದ್ ರಾಜಣ್ಣ, ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಎಚ್. ಬಿ. ಅರವಿಂದ, ಸಂಚಾಲಕರಾದ ಡಾ. ಎ. ಜೆ. ಶಂಕರಮೂರ್ತಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

# ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ಇಂದು

vijayakarnataka
17-05-2025

**ದಾವಣಗೆರೆ:** ಬಿಐಇಟಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ ನಿರ್ಮಾಣ 5.0 ಯೋಜನಾ ಪ್ರದರ್ಶನ–2025 ಮತ್ತು ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ಕಾರ್ಯಕ್ರಮ ಮೇ 17ರಂದು ಬೆಳಗ್ಗೆ 10ಕ್ಕೆ ಕಾಲೇಜು ಆವರಣದಲ್ಲಿರುವ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಏರ್ಪಡಿಸಲಾಗಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರತರಲು ಈ ವೇದಿಕೆಯನ್ನು ಕಲ್ಪಿಸಲಾಗಿದೆ. ಸುಮಾರು 9 ವಿಭಾಗಗಳ 60 ವಿದ್ಯಾರ್ಥಿಗಳ ಯೋಜನೆಗಳನ್ನು ಪ್ರದರ್ಶಿಸಲಾಗುವುದು. 'ಅತ್ಯುತ್ತಮ ನವೀನ ಯೋಜನೆ', 'ಸಾಮಾಜಿಕ ಕಳಕಳಿಯಿರುವ ಅತ್ಯುತ್ತಮ ಯೋಜನೆ' ಮತ್ತು ವಿಭಾಗದ ಅತ್ಯುತ್ತಮ ಯೋಜನೆಗಳಿಗೆ ಪ್ರಶಸ್ತಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## 60 ಪ್ರಾಜೆಕ್ಟ್‌ಗಳ ಪ್ರದರ್ಶನ

# ಬಿಐಇಟಿಯಲ್ಲಿ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ

nagaravani 17-05-2025

ದಾವಣಗೆರೆ: ಬಿಐಇಟಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ ನಿರ್ಮಾಣ 5.0 ಯೋಜನಾ ಪ್ರದರ್ಶನ–2025 ಮತ್ತು ರಾಷ್ಟ್ರೀಯ ತಂತ್ರಜ್ಞಾನ ದಿನ–2025 ಆಚರಣೆಯನ್ನು ಮೇ.17ರಂದು ಬೆಳಿಗ್ಗೆ 10 ಗಂಟೆಗೆ ಕಾಲೇಜು ಆವರಣದಲ್ಲಿರುವ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂತಿಮ ವರ್ಷದ ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಈ ವೇದಿಕೆಯನ್ನು ಕಲ್ಪಿಸಲಾಗಿದೆ. ಸುಮಾರು 9 ವಿಭಾಗಗಳ 60 ವಿದ್ಯಾರ್ಥಿ ಯೋಜನೆಗಳನ್ನು ಪ್ರದರ್ಶಿಸಲಾಗುವದು, 'ಅತ್ಯುತ್ತಮ ನವೀನ ಯೋಜನೆ' 'ಸಾಮಾಜಿಕ ಕಳಕಳಿಯಿರುವ ಅತ್ಯುತ್ತಮ ಯೋಜನೆ' ಮತ್ತು 'ವಿಭಾಗದ ಅತ್ಯುತ್ತಮ ಯೋಜನೆ' ಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ.

ಬೆಂಗಳೂರು 1 ಪೇಜ್ ಸಂಸ್ಥಾಪಕರು, ಹಳೆಯ ವಿದ್ಯಾರ್ಥಿಯಾದ ಪೂರಣ ಪ್ರಸಾದ್ ರಾಜಣ್ಣ, ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಎಚ್. ಬಿ. ಅರವಿಂದ, ಸಂಚಾಲಕರಾದ ಡಾ. ಎ. ಜಿ. ಶಂಕರಮೂರ್ತಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

janathavani

# ಬಿಐಇಟಿ ಕಾಲೇಜಿನಲ್ಲಿ ಇಂದು

ದಾವಣಗೆರೆಯ ಬಿಐಇಟಿ ಕಾಲೇಜಿನ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ 'ನಿರ್ಮಾಣ 5.0 ಯೋಜನಾ ಪ್ರದರ್ಶನ-2025 ಮತ್ತು ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ 1 ಪೇಜ್ ಸಂಸ್ಥೆಯ ಸಂಸ್ಥಾಪಕರೂ ಹಾಗೂ ಸಿಇಓ ಆಗಿರುವ ಪೂರ್ಣನ್ ಪ್ರಸಾದ್ ರಾಜಣ್ಣ ಹಾಗೂ ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಆಗಮಿಸಲಿದ್ದಾರೆ. ಪ್ರಾಂಶುಪಾಲ ಡಾ. ಎಚ್. ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದ ಸಂಚಾಲಕ ಡಾ. ಎ. ಜಿ. ಶಂಕರಮೂರ್ತಿ ಉಪಸ್ಥಿತರಿರುವರು.

ನಗರವಾಣಿ 18-05-2025

## ಜಿಮ್ ವಾಕರ್‌ನಿಂದ ವಿದ್ಯುತ್ ಉತ್ಪಾದನೆ; ಬೆಂಕಿ ತಡೆಯುವ ಬಟ್ಟೆ

# ಗಮನ ಸೆಳೆದ ಬಿಐಇಟಿ ವಿದ್ಯಾರ್ಥಿಗಳ ಹೊಸ ಸಂಶೋಧನಾತ್ಮಕ ಆವಿಷ್ಕಾರಗಳು!



ದಾ ನಗರವಾಣಿ ಸುದ್ದಿ

ದಾವಣಗೆರೆ: ರೈತರು ಬೆಳೆದ ತರಕಾರಿಗಳನ್ನು ತಿಂಗಳು ಕಾಲ ಸಂಗ್ರಹಿಸಬಹುದು, ಪೈನಾಪಲ್ ಹಣ್ಣಿನ ಸಿಪ್ಪೆಯ ಪುಡಿಯನ್ನು ಕಾಟನ್ ಬಟ್ಟೆ ತಯಾರಿಕೆಯಲ್ಲಿ ಬಳಸಿದರೆ ಬೆಂಕಿಯಿಂದ ರಕ್ಷಿಸಿಕೊಳ್ಳಬಹುದು, ಜಿಮ್ ವಾಕರ್ ಮೂಲಕ ವಿದ್ಯುತ್ ಉತ್ಪಾದಿಸಬಹುದು ಸೇರಿದಂತೆ ಅನೇಕ ಉಳಿತಾಯ ಮತ್ತು ಉಪಯುಕ್ತ ಯೋಜನೆಗಳನ್ನು ಆವಿಷ್ಕಾರ ಮಾಡಿ ಬಿಐಇಟಿ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು.

ನಗರದ ಬಿಐಇಟಿ ಕಾಲೇಜು ಆವರಣದಲ್ಲಿರುವ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳ ನಿರ್ಮಾಣ 5.0 ಯೋಜನಾ ಪ್ರದರ್ಶನ–2025 ಮತ್ತು ರಾಷ್ಟ್ರೀಯ ತಂತ್ರಜ್ಞಾನ ದಿನ–2025 ಆಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ 9 ವಿಭಾಗದ ವಿದ್ಯಾರ್ಥಿಗಳು 60 ಯೋಜನೆಗಳನ್ನು ಪ್ರದರ್ಶಿಸಿದರು.

ಮೆಕ್ಯಾನಿಕಲ್ ವಿಭಾಗದ ವಿನೋದ್ ಕೃಷ್ಣ ಮತ್ತು ತಂಡ ರೈತರ ಶ್ರಮವನ್ನು ಕಡಿಮೆ ಮಾಡುವ ಯೋಜನೆಯನ್ನು ಆವಿಷ್ಕರಿಸಿದ್ದರು. ಎಲೆಕ್ಟ್ರಿಕಲ್ ಫರ್ಟಿಲೈಸರ್ ಸ್ಪೆಡರ್ ಎಂಬ ಯೋಜನೆಯನ್ನು ತಯಾರಿಸಿ ಇದರ ಮೂಲಕ ಗೊಬ್ಬರ, ಕಾಳು ಚೆಲ್ಲುವ ವಿಧಾನವನ್ನು ತೋರಿಸಿಕೊಟ್ಟರು. ಇದು ರೈತರ ಶ್ರಮವನ್ನು ಕಡಿಮೆ ಮಾಡುವುದರ ಜೊತೆಗೆ ಸಮಯವನ್ನು ಸಹ ಉಳಿಸುತ್ತದೆ ಎಂದರು.

ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಫೈಜಲ್ ಅಹಮದ್ ಮತ್ತವರ ತಂಡ ಎಲೆಕ್ಟ್ರಿಕಲ್ ಪವರ್ ಫ್ರಂ ಏರ್ ವಾಲ್ಕರ್ ಎಂಬ ಯೋಜನೆಯನ್ನು ಆವಿಷ್ಕರಿಸಿದ್ದರು. ನಗರದ ಪಾರ್ಕ್‌ಗಳು ಸೇರಿದಂತೆ ಸಾರ್ವಜನಿಕ ಸ್ಥಳದಲ್ಲಿ ಅಳವಡಿಸಿರುವ ಏರ್ ವಾಲ್ಕರ್‌ನಲ್ಲಿ ಈ ಯೋಜನೆಯನ್ನು ಅಳಡಿಸಿದರೆ ವಿದ್ಯುತ್ ಉತ್ಪಾದನೆ ಮಾಡಬಹುದು ಎಂದರು.

ಬೆಂಕಿ ಅವಘಡಗಳು ನಡೆದ ಸಂದರ್ಭದಲ್ಲಿ ನಾವು ಧರಿಸುವ ಕಾಟನ್ ಬಟ್ಟೆ ನಮ್ಮನ್ನು ರಕ್ಷಿಸುತ್ತದೆ ಎಂಬುದನ್ನು ಟೆಕ್ಸ್‌ಟೈಲ್ ವಿಭಾಗದ ವಿದ್ಯಾರ್ಥಿಗಳಾದ ಶ್ರೀತೇಜ್ ಮತ್ತವರ ತಂಡ ತಮ್ಮ ಡೆವೆಲಪ್ ಮೆಂಟ್ ಆಫ್ ಫ್ಲೇಮ್ ರೆ–ಟರ್ಡೆಂಟ್ ಆವಿಷ್ಕಾರದಲ್ಲಿ ಪ್ರಸ್ತುತಪಡಿಸಿದರು. ಕಾಟನ್ ಬಟ್ಟೆ ತಯಾರಿಕೆಯಲ್ಲಿ ಪೈನಾಪಲ್ ಹಣ್ಣಿನ ಸಿಪ್ಪೆಯ ಪುಡಿಯನ್ನು ಬಳಕೆ ಮಾಡುವುದರಿಂದ ಬೆಂಕಿಯಿಂದ ರಕ್ಷಿಸಿಕೊಳ್ಳಬಹುದು ಎಂದ ಅವರು, ಎಷ್ಟು ಪ್ರಮಾಣದಲ್ಲಿ ಬೆಂಕಿಯನ್ನು ನಿಯಂತ್ರಿಸಲಿದೆ ಎಂಬುದನ್ನು ಇನ್ನು ಆವಿಷ್ಕಾರ ಮಾಡಬೇಕು ಎಂದರು.

ಕಾಫಿ ಪೌಡರನ್ನು ಬಟ್ಟೆ ತಯಾರಿಕೆಯಲ್ಲಿ ಬಳಸಿದರೆ ಕೆಲವು ಸೋಂಕುಗಳಿಂದ ಮನುಷ್ಯನನ್ನು ಬಟ್ಟೆ ರಕ್ಷಣೆ ಮಾಡಲಿದೆ ಎಂಬುದನ್ನು ಟೆಕ್ಸ್‌ಟೈಲ್ ವಿಭಾಗದ ಶ್ರೀನಿವಾಸ್ ಮತ್ತವರ ತಂಡ ಆವಿಷ್ಕರಿಸಿದ್ದರು. ಮೆಕ್ಯಾನಿಕಲ್ ವಿದ್ಯಾರ್ಥಿ ನಾಗರಾಜ್ ಮತ್ತು ತಂಡ ಉಪಯೋಗಿಸಿದ ನೀರಿನ

ಬಾಟಲ್‌ಗಳಿಂದ ಅಡುಗೆಗೆ ಬೇಕಾದ ಸಾಮಾನುಗಳನ್ನು ತಯಾರಿಸುವ ವಿಧಾನವನ್ನು ತೋರಿಸಿಕೊಟ್ಟರು.

ಸಿವಿಲ್ ವಿಭಾಗದ ವಿದ್ಯಾರ್ಥಿ ಶೇಖರ್ ಗೌಡ ಮತ್ತವರ ತಂಡ ಟ್ರಾಫಿಕ್ ಸಮಸ್ಯೆಯನ್ನು ತಡೆಗಟ್ಟಬಹುದಾದ ಕುರಿತು ಜಾಗೃತಿ ಮೂಡಿಸಿದರು. ದಾವಣಗೆರೆ ನಗರದಲ್ಲಿ ಸಿಗ್ನಲ್‌ಗಳಿಗೆ ಒಂದೇ ಸಮಯದಲ್ಲಿ ಚಾಲನೆ ನೀಡಿ, ಹಸಿರು ದೀಪ, ಕೆಂಪು ದೀಪ ಮತ್ತು ಆ್ಯಂಬುಲೆನ್ಸ್‌ಗಳಿಗೆ ಎಲ್ಲಾ ಸಿಗ್ನಲ್‌ಗಳಲ್ಲಿ ಒಂದೇ ಸಮಯವನ್ನು ನಿಗದಿ ಮಾಡುವುದರಿಂದ ನಗರದಲ್ಲಿ ಟ್ರಾಫಿಕ್ ಸಮಸ್ಯೆಯನ್ನು ಬಗೆಹರಿಸಬಹುದು ಎಂಬ ವಿಧಾನವನ್ನು ಆವಿಷ್ಕರಿಸಿದ್ದರು.

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ವಿದ್ಯಾರ್ಥಿ ಧನಂಜಯ್ ಮತ್ತು ಸಂಗಡಿಗರು ರೈಲು ಹಳಿಗಳಲ್ಲಿ ಸಿಗ್ನಲ್‌ಗಳನ್ನು ಅಳವಡಿಸಿ ಜಿಪಿಎಸ್ ಮೂಲಕ ರೈಲುಗಳ ನಡುವೆ ನಡೆಯಬಹುದಾದ ಅಪಘಾತಗಳನ್ನು ತಡೆಗಟ್ಟುವ ವಿಧಾನವನ್ನು ತಾವು ಆವಿಷ್ಕರಿಸಿದ್ದ ಇನ್ ಕ್ಯಾಬ್ ಮೂಲಕ ತೋರಿಸಿಕೊಟ್ಟರು.

ಕೊಳಚೆ ನೀರನ್ನು ಕೃಷಿಗೆ ಬಳಕೆ ಮಾಡಿಕೊಳ್ಳಬಹುದಾದ ನೀರನ್ನಾಗಿ ಹೇಗೆ ಪರಿವರ್ತನೆ ಮಾಡಿಕೊಳ್ಳಬಹುದು ಎಂಬುದನ್ನು ತಾವು ಆವಿಷ್ಕರಿಸಿದ್ದ ಹಾಟ್ ಪ್ಲಾಜ್ಮ ಮೂಲಕ ಮೆಕ್ಯಾನಿಕಲ್ ವಿಭಾಗದ ರಾಹುಲ್ ತಂಡ ತೋರಿಸಿತು. ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ರೇಣುಕಾರಾಧ್ಯ ಮತ್ತು ತಂಡ ಹ್ಯೂಮನ್ ರೋಬೋಟ್ ತಯಾರಿಸಿದ್ದರು. ಈ ರೋಬಟ್ ಕಾರ್ಯಕ್ರಮಗಳಲ್ಲಿ ಅತಿಥಿಗಳನ್ನು ಸತ್ಕರಿಸಿ, ಫೀಡ್ ಬ್ಯಾಕ್ ಕೊಡುವ ವ್ಯವಸ್ಥೆಯಿಂದ ಮನುಷ್ಯನಲ್ಲಿ ಬ್ಯಾಕ್ಟೀರಿಯಗಳನ್ನು ನಿಯಂತ್ರಿಸುವ ವ್ಯವಸ್ಥೆಯನ್ನು ಹೊಂದಿದೆ ಎಂದರು.

ವಾಹನಗಳಲ್ಲಿ ಸೆನ್ಸಾರ್ ವ್ಯವಸ್ಥೆಯನ್ನು ಅಳವಡಿಸಿ ಅಪಘಾತಗಳನ್ನು ತಡೆಯಬಹುದು ಎನ್ನುವುದನ್ನು ಮೆಕ್ಯಾನಿಕಲ್ ವಿಭಾಗದ ಪೃಥ್ವಿರಾಜ್ ಮತ್ತವರ ತಂಡ ತೋರಿಸಿದರೆ, ಡೈನಾಮಿಕ್ ವೈರ್‌ಲೆಸ್ ಇವಿ ಚಾರ್ಜಿಂಗ್ ಸಿಸ್ಟಮ್‌ನಿಂದ ಎಲೆಕ್ಟ್ರಾನಿಕ್ ಬಸ್, ಕಾರು, ಬೈಕ್‌ಗಳನ್ನು ಸೋಲಾರ್ ಮೂಲಕ ಚಾರ್ಜಿಂಗ್ ಮಾಡಬಹುದಾದ ಯೋಜನೆಯನ್ನು ತಯಾರಿಸಿ ತೋರಿಸಿಕೊಟ್ಟರು.

ಮಾಹಿತಿ ವಿಜ್ಞಾನ ವಿಭಾಗದ ರೇಣುಕಾ ಪ್ರಸಾದ್ ಮತ್ತು ಧನುಷ್ ಎಐ ಮೂಲಕ ಹೆಲ್ಮೆಟ್ ಹಾಕದೆ ಚಾಲನೆ ಮಾಡುವವರಿಗೆ ಕ್ಷಣಮಾತ್ರದಲ್ಲೇ ದಂಡದಿಂದ ಹಿಡಿದು, ದಂಡ ಕಟ್ಟಬಹುದಾದ ಲಿಂಕ್ ಅನ್ನು ಎಸ್.ಎಂ.ಎಸ್ ಕಳುಹಿಸುವ ವ್ಯವಸ್ಥೆಯನ್ನು ಆವಿಷ್ಕರಿಸಿದ್ದರೆ, ಇದೇ ವಿಭಾಗದ ವಿದ್ಯಾ ಮತ್ತವರ ತಂಡ ಅರಣ್ಯ ಪ್ರದೇಶದಲ್ಲಿ ಬೆಂಕಿ ಹೊತ್ತಿಕೊಂಡರೆ ಸಿಸಿಟಿವಿಯ ಸೆನ್ಸಾರ್‌ನ ಎಸ್.ಎಮ್‌ಎಸ್ ಮೂಲಕ ಮಾಹಿತಿ ಪಡೆದು ಕೂಡಲೇ ನಿಯಂತ್ರಿಸಬಹುದಾದ ಯೋಜನೆಯನ್ನು ಕಂಡುಹಿಡಿದಿದ್ದರು.

ಕೆಮಿಕಲ್ ಇಂಜಿನಿಯರ್ ವಿಭಾಗದ ಗಗನ ಮತ್ತು ತಂಡ ಪರಿಸರ ಸಂರಕ್ಷಣೆ–ಯ ಯೋಜನೆಯನ್ನು ಆವಿಷ್ಕರಿಸಿದ್ದರು. ಪ್ಲಾಸ್ಟಿಕ್ ಬಳಸುವುದಕ್ಕಿಂತ ಪ್ಲಾಸ್ಟಿಕ್ ಬ್ಯಾಗ್‌ನ ಪ್ರತಿರೂಪದಂತಿರುವ ಸೆಲ್ಯೂಲೋಸ್ ಕೋಟೆಡ್ ಪೇಪರ್ ಬ್ಯಾಗ್ ಅನ್ನು ಬಳಸಿದರೆ ಪರಿಸರಕ್ಕೆ ಆಗುವ ಹಾನಿಯನ್ನು ತಪ್ಪಿಸಬಹುದು ಎಂಬುದನ್ನು ತೋರಿಸಿಕೊಟ್ಟರು.

ಸುಮಾರು ಮೂರು ಸಾವಿರಕ್ಕು ಹೆಚ್ಚು ವಿವಿಧ ಶಾಲೆಯ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರದರ್ಶನವನ್ನು ವೀಕ್ಷಣೆ ಮಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ನಿರ್ದೇಶಕರಾದ ಪ್ರೊ. ವೈ ವೃಷಭೇಂದ್ರಪ್ಪ, ಪ್ರಾಂಶುಪಾಲ ರಾದ ಡಾ. ಎಚ್ ಬಿ ಅರವಿಂದ್, ಸಂಚಾಲಕರಾದ ಡಾ. ಎ ಜಿ ಶಂಕರಮೂರ್ತಿ ಹಾಗೂ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ತರಕಾರಿಗಳನ್ನು ತಿಂಗಳುಗಳ ಕಾಲ ಸಂಗ್ರಹಿಸಿದರೆ ಏನು ಆಗದ ಯೋಜನೆಯನ್ನು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಾದ ಶ್ರೇಯಸ್, ಯಶ್ವಂತ್, ಮಧು ಆರ್ ಗೌಳಿ, ರಕ್ಷಿತ್ ನಿಕಿತ್ ಆವಿಷ್ಕರಿಸಿದ್ದು ವಿಶೇಷವಾಗಿತ್ತು. ರೈತರು ತಾವು ಬೆಳೆದ ತರಕಾರಿಗಳಿಗೆ ಸರಿಯಾದ ಬೆಲೆ ಸಿಗದೆ ಇದ್ದಾಗ, ಕೊಂಡುಕೊಳ್ಳುವವರು ಇಲ್ಲದೆ ಇದ್ದಾಗ ಕೊಳೆತು ಹೋಗುವ ಸಂಭವವಿರುತ್ತದೆ. ಅಂತಹ ಸಮಯದಲ್ಲಿ ಈ ಯೋಜನೆ ಬಹು ಉಪಯುಕ್ತ ಎನ್ನಬಹುದು. ಸ್ಮಾರ್ಟ್ ಫ್ರೂಟ್ ಪ್ರಿಜರ್ವೇಷನ್ ಸಿಸ್ಟಮ್ ಎಂಬ ಯೋಜನೆಯನ್ನು ವಿದ್ಯಾರ್ಥಿಗಳು ಆವಿಷ್ಕರಿಸಿದ್ದು, ಒಂದು ಸ್ಥಳದಲ್ಲಿ ಪಿರಮಿಡ್ ಆಕಾರದಲ್ಲಿ ಈ ಯೋಜನೆಯನ್ನು ನಿರ್ಮಿಸಿ, ಕೆಲವು ವ್ಯವಸ್ಥೆಯನ್ನು ಅಳವಡಿಸುವುದರಿಂದ ಗಾಳಿಯನ್ನು ನಿಯಂತ್ರಿಸಿ ತರಕಾರಿಯ ಗುಣಮಟ್ಟವನ್ನು ತಿಂಗಳು ಕಾಲ ಕಾಪಾಡಬಹುದು ಎಂದು ವಿದ್ಯಾರ್ಥಿಗಳು ವಿವರಿಸಿದ್ದಾರೆ. ಈ ಯೋಜನೆ ರಾಜ್ಯಮಟ್ಟಕ್ಕೆ ಆಯ್ಕೆಯಾಗಿ ಮಿಸ್ಟರ್ ಆಫ್ ಕಂಜ್ಯೂಮರ್ ಅಫೇರ್ಸ್‌ನಲ್ಲಿ 1379 ಪ್ರಾಜೆಕ್ಟ್‌ನಲ್ಲಿ 2ನೇ ಸ್ಥಾನ ಪಡೆದಿದೆ ಎಂದರು.


360 ರೂ ಅನ್ನು ಫೋನ್ ಪೇ ಮೂಲಕ ಪಾವತಿಸಿ ದಾವಣಗೆರೆ ನಗರವಾಣಿಯ ಚಂದಾದಾರರಾದರೆ (ಸಬ್ ಸ್ಕೈಬರ್) ಒಂದು ವರ್ಷ ಪ್ರತಿದಿನ ಪತ್ರಿಕೆಯ ಪಿಡಿಎಫ್ ಅನ್ನು ವಾಟ್ಸಾಪ್ ಮೂಲಕ ಕಳುಹಿಸಲಾಗುವುದು. ಸಂಪರ್ಕಿಸಿ: 9740137083.
ಫೋನ್ ಪೇ ನಂಬರ್: 98440 60736

ಕನ್ನಡಪ್ರಭ
ಭಾನುವಾರ 18.05.2025



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಶನಿವಾರ ನಡೆದ ಯೋಜನಾ ಪ್ರದರ್ಶನ, ರಾಷ್ಟ್ರೀಯ ತಂತ್ರಜ್ಞಾನ ದಿನ ಸಮಾರಂಭದಲ್ಲಿ ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಯಾರಿಸಿದ ಮಾದರಿಗಳನ್ನು ಡಾ.ಅರವಿಂದ್ ವೀಕ್ಷಿಸಿ ಮಾಹಿತಿ ಪಡೆದುಕೊಂಡರು.

ಕನ್ನಡಪ್ರಭ
ಭಾನುವಾರ 18.05.2025



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಶನಿವಾರ ನಡೆದ ಯೋಜನಾ ಪ್ರದರ್ಶನ, ರಾಷ್ಟ್ರೀಯ ತಂತ್ರಜ್ಞಾನ ದಿನ ಸಮಾರಂಭದಲ್ಲಿ ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಯಾರಿಸಿದ ಮಾದರಿಗಳನ್ನು ಡಾ.ಅರವಿಂದ್ ವೀಕ್ಷಿಸಿ ಮಾಹಿತಿ ಪಡೆದುಕೊಂಡರು.

# ಬಿಐಇಟೀಲಿ ವಿದ್ಯಾರ್ಥಿ ಸಂಶೋಧನೆಗಳ ಹಬ್ಬ

## ಯೋಜನಾ ಪ್ರದರ್ಶನ, ರಾಷ್ಟ್ರೀಯ ತಂತ್ರಜ್ಞಾನ ದಿನ | ಎಂಜಿನಿಯರ್ ವಿದ್ಯಾರ್ಥಿಗಳ ಹೊಸ ಸಂಶೋಧನೆಗಳ ಅನಾವರಣ

• **ಕನ್ನಡಪ್ರಭ ವಾರ್ತೆ** ದಾವಣಗೆರೆ 18-05-2025

ಕೈಗಾರಿಕೆಗಳಲ್ಲಿ ಅನಿಲ ಸೋರಿಕೆಯಿಂದಾಗುವ ಭಾರೀ ಅನಾಹುತ ತಪ್ಪಿಸಲು ಗ್ಯಾಸ್ ಸೋರಿಕೆಯಾಗುತ್ತಿದ್ದಂತೆಯೇ ಅಲರ್ಟ್ ನೀಡುವ ಯಂತ್ರ, ವಾಹನ, ರೈಲುಗಳ ಅಪಘಾತ ತಡೆಯುವ ಯಂತ್ರ, ಮತದಾನ ಪ್ರಮಾಣ ಹೆಚ್ಚಿಸಲು ಮನೆಯಿಂದಲೇ ಮತ ಚಲಾಯಿಸಲು ಪೂರಕವಾಗಿರುವ ವೆಬ್, ಕೃಷಿಕರಿಗೆ ಸಾಲಿನಲ್ಲಿ ಕಳೆಯುವುದನ್ನು ತಪ್ಪಿಸುವ ಟ್ರ್ಯಾಕ್ಟರ್‌ಗೆ ಡಿವೈಸ್. ಹೀಗೆ ವಿದ್ಯಾರ್ಥಿಗಳ ಆಲೋಚನೆಯಲ್ಲಿ ರೂಪುಗೊಂಡ ಅನೇಕ ಸಂಶೋಧನೆಗಳು ದಾವಣಗೆರೆ ಬಾಪೂಜಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯ (ಬಿಐಇಟಿ) ಕಾಲೇಜಿನಲ್ಲಿ ಅನಾವರಣಗೊಂಡವು.

ನಗರದ ಬಿಐಇಟಿ ಕಾಲೇಜಿನ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಶನಿವಾರ ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳು ನಿರ್ಮಾಣ 5.0 ಯೋಜನಾ ಪ್ರದರ್ಶನ-2025 ಮತ್ತು ರಾಷ್ಟ್ರೀಯ ತಂತ್ರಜ್ಞಾನ ದಿನ-2025 ಸಮಾರಂಭದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಆಲೋಚನೆ, ಪ್ರಯತ್ನದಿಂದ ರೂಪುಗೊಂಡ ಅನೇಕ ಸಂಶೋಧನೆಗಳು ಅತಿಥಿಗಳು, ಗಣ್ಯರು, ಕಾಲೇಜು ಪ್ರಾಚಾರ್ಯರು, ಪ್ರಾಧ್ಯಾಪಕರ ಗಮನ ಸೆಳೆಯುವಂತಿದ್ದವು.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಶನಿವಾರ ಯೋಜನಾ ಪ್ರದರ್ಶನ, ರಾಷ್ಟ್ರೀಯ ತಂತ್ರಜ್ಞಾನ ದಿನ ಸಮಾರಂಭದಲ್ಲಿ ಬೆಂಗಳೂರಿನ 1 ಪೇಜ್ ಸಿಇಒ ಪೂರಣ ಪ್ರಸಾದ್ ರಾಜಣ್ಣ, ಪ್ರೊ.ವೈ.ವೃಷಭೇಂದ್ರಪ್ಪ, ಡಾ.ಎಚ್.ಬಿ.ಅರವಿಂದ, ಇತರರು ಮಾದರಿ ವೀಕ್ಷಿಸಿದರು.

ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳಾದ ಕಿರಣಕುಮಾರ, ಎ.ಗಣೇಶ, ರಾಜೀವ್, ಮಹೇಶ ತಂಡವು ಬೃಹತ್ ಉದ್ದಿಮೆ, ಕೈಗಾರಿಕೆಗಳಲ್ಲಿ ಅನಿಲ ಸೋರಿಕೆಯಿಂದ ಆಗುತ್ತಿದ್ದ ಅಪಾಯ ತಡೆಗೆ ಸಿಗ್ನಲ್ ಮೂಲಕ ಜಾಗೃತಿ ಮೂಡಿಸುವ ಸಂಶೋಧನೆ ಮಾಡಿದ್ದಾರೆ. ಅನಿಲ ಸೋರಿಕೆಯಿಂದಾಗುವ ಭಾರೀ ಅನಾಹುತ ತಪ್ಪಿಸುವ ಯಂತ್ರವನ್ನು ಈ ತಂಡ ಸಂಶೋಧಿಸಿದ್ದು, ಎಲ್ಲರ ಗಮನ ಸೆಳೆಯಿತು. ಇ ಅಂಡ್ ಸಿ ವಿಭಾಗದ ಸ್ನೇಹಾ, ದೀಕ್ಷಿತಾ ತಂಡ ಸೋಲಾರ್ ಟ್ರೈಸಿಕಲ್ ತಯಾರಿಸಿದ್ದು, ಅದೇ ವಿಭಾಗದ ಮುಹಿ. ಉಸ್ಮಾನ್ ಖಾನ್ ಶಾಪಿಂಗ್ ಮಾಲ್‌ನಲ್ಲಿ ಸರದಿಯಲ್ಲಿ ನಿಂತು, ಖರೀದಿಸಿರುವ ವಸ್ತುಗಳಿಗೆ ಬಿಲ್ ಪಡೆಯುವುದನ್ನು ತಪ್ಪಿಸಲು ಸ್ಮಾರ್ಟ್ ಶಾಪಿಂಗ್ ಕಾರ್ಟ್ ಸಂಶೋಧಿಸಿದ್ದಾರೆ.

ಇ ಅಂಡ್ ಸಿ ವಿಭಾಗದ ಟಿ.ಸಹನಾ, ಎಂ.ಎಸ್. ಸಂಜನಾ, ಧನಂಜಯ, ಕೆ.ಸಹನಾ ತಂಡವು ರೈಲುಗಳ ಮಧ್ಯೆ ಆಗುವ ಅಪಘಾತ ತಪ್ಪಿಸಲು ಸಿಗ್ನಲ್‌ಗಳನ್ನು ಪ್ರಾಯೋಗಿಕವಾಗಿ ಸಂಶೋಧನೆ ಮಾಡಿದ್ದು, ರೈಲುಗಳು ಮುಖಾಮುಖಿಯಾಗುವುದನ್ನು ಸಿಗ್ನಲ್‌ನಿಂದಲೇ ಜಾಗೃತಿ ಮೂಡಿಸಿ, ರೈಲು ಅಪಘಾತ ತಪ್ಪಿಸುವ ಯೋಜನೆ ಇದಾಗಿದೆ. ಇನ್ಫಾರ್ಮೇಷನ್ ಸೈನ್ಸ್ ವಿಭಾಗದ ಐಶ್ವರ್ಯ, ಪವನ್, ಶಿವಪ್ರಸಾದ, ಚಂದನ ತಂಡವು ಅಂಧರಿಗೆ ಅನುಕೂಲವಾಗಲು ಕ್ಯಾಮೆರಾ ಕನ್ನಡಕ ತಯಾರಿಸಿದ್ದಾರೆ.

ಇನ್ಫಾರ್ಮೇಷನ್ ಅಂಡ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಾದ ಮನೀಶ್ ಎಸ್.ಚಿಕ್ಕಮಠ, ಪ್ರಜ್ವಲ್ ಮಲ್ಲೂರ್, ಎನ್.ಎಚ್.ಶಂಕರ್, ವೈ.ರವಿತೇಜ ತಂಡವು ರಸ್ತೆ ನಿಯಮ, ಸಂಚಾರ ನಿಯಮ ಪಾಲಿಸಿದರೂ ವಾಹನಗಳ ಅಪಘಾತ ತಡೆ ಸಾಧ್ಯವಾಗುತ್ತಿಲ್ಲವೆಂಬ ಕೊರಗನ್ನು ನಿವಾರಿಸುವ ಪ್ರಯತ್ನ ಮಾಡಿದ್ದಾರೆ.

ಇದೇ ವಿಭಾಗದ ನಂದನ್, ಮನೋಜ್, ಮಂಜುನಾಥ, ತೇಜಸ್ ತಂಡವು ವಿದೇಶಗಳ ಮಾದರಿಯಲ್ಲಿ ಮತದಾನಕ್ಕೆ ವೆಬ್ ಅಭಿವೃದ್ಧಿಪಡಿಸಿದ್ದಾರೆ. ಬಿಐಇಟಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಹೊರ ತರುವಲ್ಲಿ ಇಂತಹದ್ದೊಂದು ವೇದಿಕೆ ಕಲ್ಪಿಸಿದ್ದು, 9 ವಿಭಾಗಗಳ 60 ವಿದ್ಯಾರ್ಥಿ ಯೋಜನೆಗಳು ಪ್ರದರ್ಶನಗೊಂಡವು. ಬೆಂಗಳೂರಿನ 1 ಪೇಜ್ ಸಂಸ್ಥಾಪಕ, ಬಿಐಇಟಿ ಕಾಲೇಜಿನ ಹಳೆಯ ವಿದ್ಯಾರ್ಥಿ ಪೂರಣ ಪ್ರಸಾದ್ ರಾಜಣ್ಣ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ, ಸಂಚಾಲಕರಾದ ಡಾ.ಎ.ಜಿ.ಶಂಕರಮೂರ್ತಿ, ಕೆಮಿಕಲ್ ವಿಭಾಗದ ಮುಖ್ಯಸ್ಥ ಪ್ರೊ.ಕಲ್ಲೇಶಪ್ಪ, ಶ್ರೀನಿಧಿ ಕುಲಕರ್ಣಿ, ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

## ಪೋಡಿ ಮುಕ್ತ ಜಿಲ್ಲೆಯಾಗಿ ವಿಜಯನಗರ

18-05-2025
ನಂ1 ವಿಜಯವಾಣಿ
ಕನ್ನಡ ದಿನಪತ್ರಿಕೆ
ಭಾನುವಾರ 18 ಮೇ 2025

## ‘ನಿರ್ಮಾಣ 5.0’ ಪ್ರಾಜೆಕ್ಟ್‌ಗಳ ಪ್ರದರ್ಶನ | ಬಿಐಇಟಿ ಕಾಲೇಜಿನಲ್ಲಿ ಆಯೋಜನೆ | ವೀಕ್ಷಿಸಿದ ಮೂರು ಸಾವಿರ ವಿದ್ಯಾರ್ಥಿಗಳು

# ವಿದ್ಯಾರ್ಥಿಗಳ ಕಲ್ಪನೆಯಲ್ಲಿ ಅರಳಿದ ಆವಿಷ್ಕಾರ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಟೊಮ್ಯಾಟೋ ಸಂರಕ್ಷಿಸುವ ಸ್ಮಾರ್ಟ್ ವಿಧಾನ, ಸಂವಾದ ನಡೆಸುವ ರೋಬೋಟ್, ಕಾರ್ ಬಾಗಿಲು ತೆರೆಯಲು ಆಧುನಿಕ ತಂತ್ರಜ್ಞಾನ ಬಳಸಿ ಅಪಘಾತ ತಡೆಗಟ್ಟುವಿಕೆ. ಕಾಟನ್ ಬಟ್ಟೆಗಳಿಗೆ ಬೆಂಕಿಯಿಂದ ರಕ್ಷಣೆ, ಪರಿಸರಸ್ನೇಹಿ ಪೇಪರ್ ಬ್ಯಾಗ್‌ಗಳು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನ ಕೌಶಲಾಭಿವೃದ್ಧಿ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ, ‘ನಿರ್ಮಾಣ 5.0’ ಪ್ರಾಜೆಕ್ಟ್‌ಗಳ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ಮಾದರಿಗಳ ಝಲಕ್ ಇದು.

ಕಾಟನ್ ಬಟ್ಟೆಗಳನ್ನು ಬೆಂಕಿಯಿಂದ ರಕ್ಷಿಸುವುದು ಹೇಗೆ ಎಂಬುದನ್ನು ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದಾರೆ. ಇದಕ್ಕೆ ಅವರು ಪೈನಾಪಲ್ ಹಣ್ಣಿನ ಸಿಪ್ಪೆಯನ್ನು ಬಳಸಿದ್ದಾರೆ. ಅದರಲ್ಲಿರುವ ಗುಣವು ಬಟ್ಟೆಯನ್ನು ಸಂರಕ್ಷಿಸುತ್ತದೆ ಎಂದು ವಿದ್ಯಾರ್ಥಿಗಳು ವಿವರಿಸಿದರು. ವಿಶೇಷವಾಗಿ ಮಕ್ಕಳು ಧರಿಸುವ ಬಟ್ಟೆಗಳಿಗೆ, ಮನೆಯೊಳಗೆ ಬಳಸುವ ಕರ್ಟನ್ ಇನ್ನಿತರ ಬಟ್ಟೆಗಳಿಗೆ ಇದು ಉಪಯುಕ್ತವಾಗಲಿದೆ.

ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟಿ, ಅದಕ್ಕೆ ಪರ್ಯಾಯವಾಗಿ ಸೆಲ್ಯುಲೋಸ್ ಕೋಟೆಡ್ ಪೇಪರ್ ಬ್ಯಾಗ್‌ಗಳನ್ನು ಬಳಸುವ ತಂತ್ರಜ್ಞಾನವನ್ನು ವಿದ್ಯಾರ್ಥಿಗಳು ಆವಿಷ್ಕರಿಸಿದ್ದಾರೆ. ಈ ಪೇಪರ್ ಬ್ಯಾಗ್‌ಗಳು ನೀರು ಮತ್ತು ಎಣ್ಣೆಯಿಂದ ತೇವವಾಗುವುದಿಲ್ಲ. ಪರಿಸರ ಸ್ನೇಹಿಯೂ ಆಗಿವೆ.

ಹೀಗೆ ಕಾಲೇಜಿನ 9 ವಿಭಾಗಗಳ 60ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು. 3 ಸಾವಿರಕ್ಕೂ ಹೆಚ್ಚು ವಿವಿಧ ಶಾಲೆಯ ಮಕ್ಕಳು ಪ್ರದರ್ಶನ ವೀಕ್ಷಿಸಿದರು. ಪ್ರದರ್ಶನ ಉದ್ಘಾಟಿಸಿದ ಬೆಂಗಳೂರು 1 ಪೇಜ್ ಸಂಸ್ಥಾಪಕ ಪೂರಣ ಪ್ರಸಾದ್ ರಾಜಣ್ಣ ಮಾತನಾಡಿ, ಕೃತಕ ಬುದ್ಧಿಮತ್ತೆ ಎಲ್ಲ ಕ್ಷೇತ್ರಗಳನ್ನು ಆವರಿಸಿದ್ದು ಇಂಜಿನಿಯರಿಂಗ್ ವಿನ್ಯಾಸಗಳನ್ನು ಅತಿ ಕಡಿಮೆ ಸಮಯದಲ್ಲಿ ಮಾಡಬಹುದು ಎಂದು ತಿಳಿಸಿದರು.

ಕಾಲೇಜು ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ. ಎಚ್.ಬಿ. ಅರವಿಂದ, ಸಂಚಾಲಕ ಡಾ. ಎ.ಜಿ. ಶಂಕರಮೂರ್ತಿ ಹಾಗೂ ವಿಭಾಗಗಳ ಮುಖ್ಯಸ್ಥರು ಭಾಗವಹಿಸಿದ್ದರು.


ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಶನಿವಾರ, ‘ನಿರ್ಮಾಣ 5.0’ ಪ್ರಾಜೆಕ್ಟ್‌ಗಳ ಪ್ರದರ್ಶನವನ್ನು ಬೆಂಗಳೂರು 1 ಪೇಜ್ ಸಂಸ್ಥಾಪಕ ಪೂರಣ ಪ್ರಸಾದ್ ರಾಜಣ್ಣ ಉದ್ಘಾಟಿಸಿದರು. ಪ್ರೊ. ವೈ. ವೃಷಭೇಂದ್ರಪ್ಪ, ಡಾ. ಎಚ್.ಬಿ. ಅರವಿಂದ, ಡಾ. ಎ.ಜಿ. ಶಂಕರಮೂರ್ತಿ, ವಿವಿಧ ವಿಭಾಗ ಮುಖ್ಯಸ್ಥರು ಇದ್ದರು.

## ಕಾರ್ ಡೋರ್ ಓಪನಿಂಗ್ ತಂತ್ರಜ್ಞಾನ

ಕಾರ್ ಪಾರ್ಕಿಂಗ್ ಮಾಡಿ ಬಾಗಿಲು ತೆರೆದು ಹೊರಗೆ ಬರಲು ಪ್ರಯತ್ನಿಸುವಾಗ ಹಿಂದಿನಿಂದ ಬರುವ ವಾಹನ ಡಿಕ್ಕಿಯಾಗಿ ಅಪಾಯ ಸಂಭವಿಸುವ ಸಾಧ್ಯತೆ ಇರುತ್ತದೆ. ಇದನ್ನು ಮನಗಂಡು ವಿದ್ಯಾರ್ಥಿಗಳು ಕಾರ್ ಡೋರ್ ತೆರೆಯುವ ಆಧುನಿಕ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದ್ದಾರೆ. ಇದರಲ್ಲಿ ಅಳವಡಿಸಲಾಗುವ ಸೆನ್ಸರ್‌ಗಳು ವಾಹನಗಳ ಬರುವಿಕೆಯನ್ನು ಗುರುತಿಸುತ್ತವೆ. ಎಚ್ಚರಿಕೆ ನೀಡಿ ಸುರಕ್ಷಿತವಾಗಿ ಡೋರ್ ನಿರ್ವಹಣೆ ಆಗುವಂತೆ ಮಾಡುತ್ತವೆ. ಡೋರ್ ಲಾಕ್ ಆಗುವುದರೊಂದಿಗೆ ಅಪಾಯವನ್ನು ತಡೆಯುತ್ತದೆ.

## ಟೊಮ್ಯಾಟೋ ರಕ್ಷಣೆಗೆ ಸ್ಮಾರ್ಟ್ ವಿಧಾನ



ಟೊಮ್ಯಾಟೋ ಬಹಳ ಬೇಗ ಹಾಳಾಗುವ ಕೃಷಿ ಉತ್ಪನ್ನವಾಗಿದೆ. ಅವುಗಳನ್ನು ಕೆಡದಂತೆ ರಕ್ಷಿಸುವುದು ರೈತರಿಗೆ ದೊಡ್ಡ ಸವಾಲು. ಈ ಹಿನ್ನೆಲೆಯಲ್ಲಿ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ಟೊಮ್ಯಾಟೋ ಸಂರಕ್ಷಿಸುವ ಸ್ಮಾರ್ಟ್ ವಿಧಾನವನ್ನು ಆವಿಷ್ಕಾರ ಮಾಡಿದ್ದಾರೆ. ರೈತರು ಬೆಳೆದ ಟೊಮ್ಯಾಟೋ ಕಾಯಿಗಳು ಹಣ್ಣಾಗುವ ಕ್ರಿಯೆಯನ್ನು ವಿಳಂಬಿಸುವುದು ಈ ಪ್ರಾಜೆಕ್ಟ್‌ನ ಪರಿಕಲ್ಪನೆಯಾಗಿದೆ. ಇದಕ್ಕೆ ಧ್ವನಿ ತರಂಗಗಳು ಹಾಗೂ ಯುವಿ-ಸಿ ಮತ್ತು ಕೆಂಪು ದೀಪವನ್ನು ಬಳಸಲಾಗುತ್ತದೆ. ಟೊಮ್ಯಾಟೋ ಹಣ್ಣಾಗುವುದನ್ನು ಆರೇಳು ದಿನಗಳಿಂದ 30 ದಿನಗಳಿಗೆ ವಿಸ್ತರಿಸಲು ಇದರಿಂದ ಸಾಧ್ಯವಿದೆ. ಇದರಿಂದ ರೈತರಿಗಾಗುವ ನಷ್ಟವನ್ನು ತಡೆಗಟ್ಟಬಹುದಾಗಿದೆ.




## ಮಾನವನನ್ನು ಹೋಲುವ ರೋಬೋಟ್

ಮಾನವನ ರೂಪವನ್ನು ಹೋಲುವ ಈ ರೋಬೋಟ್ ಮಹತ್ವದ ಇವೆಂಟ್‌ಗಳಲ್ಲಿ ಆಯೋಜಕರಿಗೆ ನೆರವಾಗುತ್ತದೆ. ಕಾರ್ಯಕ್ರಮಕ್ಕೆ ಬಂದವರೊಂದಿಗೆ ಸಂವಾದ ನಡೆಸುವ ಈ ಯಂತ್ರ ಇವೆಂಟ್‌ಗೆ ಸಂಬಂಧಿಸಿದ ಮಹತ್ವದ ಮಾಹಿತಿಗಳನ್ನು ಹಂಚಿಕೊಳ್ಳುತ್ತದೆ. ಈ ರೋಬೋಟ್ ಬ್ಲೂಟೂತ್, ವೈ-ಫೈ ಸಂಪರ್ಕವನ್ನು ಹೊಂದಿದೆ. ಅಲ್ಟ್ರಾಸೋನಿಕ್ ಸೆನ್ಸರ್‌ಗಳನ್ನು ಅಳವಡಿಸಲಾಗಿದೆ. ಸುತ್ತಮುತ್ತಲಿನ ಪರಿಸರವನ್ನು ಸುರಕ್ಷಿತವಾಗಿಡುವ ವ್ಯವಸ್ಥೆಯನ್ನೂ ಇದು ಹೊಂದಿದೆ.

‘ನಿರ್ಮಾಣ 5.0’ ಪ್ರಾಜೆಕ್ಟ್‌ಗಳ ಪ್ರದರ್ಶನ | ಬಿಐಇಟಿ ಕಾಲೇಜಿನಲ್ಲಿ ಆಯೋಜನೆ | ವೀಕ್ಷಿಸಿದ ಮೂರು ಸಾವಿರ ವಿದ್ಯಾರ್ಥಿಗಳು

vijayavani 19-05-2025

# ವಿದ್ಯಾರ್ಥಿಗಳ ಕಲ್ಪನೆಯಲ್ಲಿ ಅರಳಿದ ಆವಿಷ್ಕಾರ

**ವಿಜಯವಾಣಿ ಸುದ್ದಿಜಾಲ** ದಾವಣಗೆರೆ

ಟೊಮ್ಯಾಟೋ ಸಂರಕ್ಷಿಸುವ ಸ್ಮಾರ್ಟ್ ವಿಧಾನ, ಸಂವಾದ ನಡೆಸುವ ರೋಬೋಟ್, ಕಾರ್ ಬಾಗಿಲು ತೆರೆಯಲು ಆಧುನಿಕ ತಂತ್ರಜ್ಞಾನ ಬಳಸಿ ಅಪಘಾತ ತಡೆಗಟ್ಟುವಿಕೆ. ಕಾಟನ್ ಬಟ್ಟೆಗಳಿಗೆ ಬೆಂಕಿಯಿಂದ ರಕ್ಷಣೆ, ಪರಿಸರಸ್ನೇಹಿ ಪೇಪರ್ ಬ್ಯಾಗ್‌ಗಳು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನ ಕೌಶಲಾಭಿವೃದ್ಧಿ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ, ‘ನಿರ್ಮಾಣ 5.0’ ಪ್ರಾಜೆಕ್ಟ್‌ಗಳ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ಮಾದರಿಗಳ ಝಲಕ್ ಇದು.

ಕಾಟನ್ ಬಟ್ಟೆಗಳನ್ನು ಬೆಂಕಿಯಿಂದ ರಕ್ಷಿಸುವುದು ಹೇಗೆ ಎಂಬುದನ್ನು ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದಾರೆ. ಇದಕ್ಕೆ ಅವರು ಪೈನಾಪಲ್ ಹಣ್ಣಿನ ಸಿಪ್ಪೆಯನ್ನು ಬಳಸಿದ್ದಾರೆ. ಅದರಲ್ಲಿರುವ ಗುಣವು ಬಟ್ಟೆಯನ್ನು ಸಂರಕ್ಷಿಸುತ್ತದೆ ಎಂದು ವಿದ್ಯಾರ್ಥಿಗಳು ವಿವರಿಸಿದರು. ವಿಶೇಷವಾಗಿ ಮಕ್ಕಳು ಧರಿಸುವ ಬಟ್ಟೆಗಳಿಗೆ, ಮನೆಯೊಳಗೆ ಬಳಸುವ ಕರ್ಟನ್ ಇನ್ನಿತರ ಬಟ್ಟೆಗಳಿಗೆ ಇದು ಉಪಯುಕ್ತವಾಗಲಿದೆ.

ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟಿ, ಅದಕ್ಕೆ ಪರ್ಯಾಯವಾಗಿ ಸೆಲ್ಯುಲೋಸ್ ಕೋಟೆಡ್ ಪೇಪರ್ ಬ್ಯಾಗ್‌ಗಳನ್ನು ಬಳಸುವ ತಂತ್ರಜ್ಞಾನವನ್ನು ವಿದ್ಯಾರ್ಥಿಗಳು ಆವಿಷ್ಕರಿಸಿದ್ದಾರೆ. ಈ ಪೇಪರ್ ಬ್ಯಾಗ್‌ಗಳು ನೀರು ಮತ್ತು ಎಣ್ಣೆಯಿಂದ ತೇವವಾಗುವುದಿಲ್ಲ. ಪರಿಸರ ಸ್ನೇಹಿಯೂ ಆಗಿವೆ.

ಹೀಗೆ ಕಾಲೇಜಿನ 9 ವಿಭಾಗಗಳ 60ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು. 3 ಸಾವಿರಕ್ಕೂ ಹೆಚ್ಚು ವಿವಿಧ ಶಾಲೆಯ ಮಕ್ಕಳು ಪ್ರದರ್ಶನ ವೀಕ್ಷಿಸಿದರು. ಪ್ರದರ್ಶನ ಉದ್ಘಾಟಿಸಿದ ಬೆಂಗಳೂರು 1 ಪೇಜ್ ಸಂಸ್ಥಾಪಕ ಪೂರಣ ಪ್ರಸಾದ್ ರಾಜಣ್ಣ ಮಾತನಾಡಿ, ಕೃತಕ ಬುದ್ಧಿಮತ್ತೆ ಎಲ್ಲ ಕ್ಷೇತ್ರಗಳನ್ನು ಆವರಿಸಿದ್ದು ಇಂಜಿನಿಯರಿಂಗ್ ವಿನ್ಯಾಸಗಳನ್ನು ಅತಿ ಕಡಿಮೆ ಸಮಯದಲ್ಲಿ ಮಾಡಬಹುದು ಎಂದು ತಿಳಿಸಿದರು.

ಕಾಲೇಜು ನಿರ್ದೇಶಕ ಪ್ರೊ. ವೈ. ವೃಷಬೇಂದ್ರಪ್ಪ, ಪ್ರಾಚಾರ್ಯ ಡಾ. ಎಚ್.ಬಿ. ಅರವಿಂದ, ಸಂಚಾಲಕ ಡಾ. ಎ.ಜಿ. ಶಂಕರಮೂರ್ತಿ ಹಾಗೂ ವಿಭಾಗಗಳ ಮುಖ್ಯಸ್ಥರು ಭಾಗವಹಿಸಿದ್ದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಶನಿವಾರ, ‘ನಿರ್ಮಾಣ 5.0’ ಪ್ರಾಜೆಕ್ಟ್‌ಗಳ ಪ್ರದರ್ಶನವನ್ನು ಬೆಂಗಳೂರು 1 ಪೇಜ್ ಸಂಸ್ಥಾಪಕ ಪೂರಣ ಪ್ರಸಾದ್ ರಾಜಣ್ಣ ಉದ್ಘಾಟಿಸಿದರು. ಪ್ರೊ. ವೈ. ವೃಷಭೇಂದ್ರಪ್ಪ, ಡಾ. ಎಚ್.ಬಿ. ಅರವಿಂದ, ಡಾ. ಎ.ಜಿ. ಶಂಕರಮೂರ್ತಿ, ವಿವಿಧ ವಿಭಾಗ ಮುಖ್ಯಸ್ಥರು ಇದ್ದರು.

## ಕಾರ್ ಡೋರ್ ಓಪನಿಂಗ್ ತಂತ್ರಜ್ಞಾನ

ಕಾರ್ ಪಾರ್ಕಿಂಗ್ ಮಾಡಿ ಬಾಗಿಲು ತೆರೆದು ಹೊರಗೆ ಬರಲು ಪ್ರಯತ್ನಿಸುವಾಗ ಹಿಂದಿನಿಂದ ಬರುವ ವಾಹನ ಡಿಕ್ಕಿಯಾಗಿ ಅಪಾಯ ಸಂಭವಿಸುವ ಸಾಧ್ಯತೆ ಇರುತ್ತದೆ. ಇದನ್ನು ಮನಗಂಡು ವಿದ್ಯಾರ್ಥಿಗಳು ಕಾರ್ ಡೋರ್ ತೆರೆಯುವ ಆಧುನಿಕ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದ್ದಾರೆ. ಇದರಲ್ಲಿ ಅಳವಡಿಸಲಾಗುವ ಸೆನ್ಸರ್‌ಗಳು ವಾಹನಗಳ ಬರುವಿಕೆಯನ್ನು ಗುರುತಿಸುತ್ತವೆ. ಎಚ್ಚರಿಕೆ ನೀಡಿ ಸುರಕ್ಷಿತವಾಗಿ ಡೋರ್ ನಿರ್ವಹಣೆ ಆಗುವಂತೆ ಮಾಡುತ್ತವೆ. ಡೋರ್ ಲಾಕ್ ಆಗುವುದರೊಂದಿಗೆ ಅಪಾಯವನ್ನು ತಡೆಯುತ್ತದೆ.

## ಟೊಮ್ಯಾಟೋ ರಕ್ಷಣೆಗೆ ಸ್ಮಾರ್ಟ್ ವಿಧಾನ



ಟೊಮ್ಯಾಟೋ ಬಹಳ ಬೇಗ ಹಾಳಾಗುವ ಕೃಷಿ ಉತ್ಪನ್ನವಾಗಿದೆ. ಅವುಗಳನ್ನು ಕೆಡದಂತೆ ರಕ್ಷಿಸುವುದು ರೈತರಿಗೆ ದೊಡ್ಡ ಸವಾಲು. ಈ ಹಿನ್ನೆಲೆಯಲ್ಲಿ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ಟೊಮ್ಯಾಟೋ ಸಂರಕ್ಷಿಸುವ ಸ್ಮಾರ್ಟ್ ವಿಧಾನವನ್ನು ಆವಿಷ್ಕಾರ ಮಾಡಿದ್ದಾರೆ. ರೈತರು ಬೆಳೆದ ಟೊಮ್ಯಾಟೋ ಕಾಯಿಗಳು ಹಣ್ಣಾಗುವ ಕ್ರಿಯೆಯನ್ನು ವಿಳಂಬಿಸುವುದು ಈ ಪ್ರಾಜೆಕ್ಟ್‌ನ ಪರಿಕಲ್ಪನೆಯಾಗಿದೆ. ಇದಕ್ಕೆ ಧ್ವನಿ ತರಂಗಗಳು ಹಾಗೂ ಯುವಿ-ಸಿ ಮತ್ತು ಕೆಂಪು ದೀಪವನ್ನು ಬಳಸಲಾಗುತ್ತದೆ. ಟೊಮ್ಯಾಟೋ ಹಣ್ಣಾಗುವುದನ್ನು ಆರೇಳು ದಿನಗಳಿಂದ 30 ದಿನಗಳಿಗೆ ವಿಸ್ತರಿಸಲು ಇದರಿಂದ ಸಾಧ್ಯವಿದೆ. ಇದರಿಂದ ರೈತರಿಗಾಗುವ ನಷ್ಟವನ್ನು ತಡೆಗಟ್ಟಬಹುದಾಗಿದೆ.




## ಮಾನವನನ್ನು ಹೋಲುವ ರೋಬೋಟ್

ಮಾನವನ ರೂಪವನ್ನು ಹೋಲುವ ಈ ರೋಬೋಟ್ ಮಹತ್ವದ ಇವೆಂಟ್‌ಗಳಲ್ಲಿ ಆಯೋಜಕರಿಗೆ ನೆರವಾಗುತ್ತದೆ. ಕಾರ್ಯಕ್ರಮಕ್ಕೆ ಬಂದವರೊಂದಿಗೆ ಸಂವಾದ ನಡೆಸುವ ಈ ಯಂತ್ರ ಇವೆಂಟ್‌ಗೆ ಸಂಬಂಧಿಸಿದ ಮಹತ್ವದ ಮಾಹಿತಿಗಳನ್ನು ಹಂಚಿಕೊಳ್ಳುತ್ತದೆ. ಈ ರೋಬೋಟ್ ಬ್ಲೂಟೂತ್, ವೈ-ಫೈ ಸಂಪರ್ಕವನ್ನು ಹೊಂದಿದೆ. ಅಲ್ಟ್ರಾಸೋನಿಕ್ ಸೆನ್ಸರ್‌ಗಳನ್ನು ಅಳವಡಿಸಲಾಗಿದೆ. ಸುತ್ತಮುತ್ತಲಿನ ಪರಿಸರವನ್ನು ಸುರಕ್ಷಿತವಾಗಿಡುವ ವ್ಯವಸ್ಥೆಯನ್ನೂ ಇದು ಹೊಂದಿದೆ.

# ರಕ್ತದಾನದ ಉದ್ದೇಶವೇ ಜೀವ ರಕ್ಷಣೆಯ ಗುರಿ-ಡಾ॥ಪಿ.ಕೆ.ಬಸವರಾಜ್




ದಾವಣಗೆರೆ -ರಕ್ತದಾನ ಶ್ರೇಷ್ಠದಾನ ರಕ್ತದಾನದ ಉದ್ದೇಶವೇ ಜೀವ ರಕ್ಷಣೆಯ ಗುರಿಯಾಗಿದೆ. ಎಂದು ನಿವೃತ್ತ ಪೆಥಾಲಜಿಸ್ಟ್ ಮತ್ತು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ವೈದ್ಯಾಧಿಕಾರಿಗಳಾದ ಡಾ. ಪಿ ಕೆ ಬಸವರಾಜ್ ಅಭಿಪ್ರಾಯಪಟ್ಟರು..

ನಗರದ ದವನ್ ಮತ್ತು ನೂತನ ಪದವಿ ಕಾಲೇಜು ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ನಡೆದ ರಕ್ತದಾನ ಶಿಬಿರ ಕುರಿತು ಮಾತನಾಡಿದರು ರಕ್ತದಾನದ ಶ್ರೇಷ್ಠತೆ ಮಹತ್ವದ್ದು, ರೆಡ್ ಕ್ರಾಸ್ ಸಂಸ್ಥೆ ಕೇವಲ ರಕ್ತದಾನ ಶಿಬಿರ ಮಾಡುವುದಲ್ಲ, ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಸೇವೆಗೆ ಸದಾಸಿದ್ಧ ಇರುವ ಸಂಸ್ಥೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ದವನ್ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್ ರವರು ರೆಡ್‌ಕ್ರಾಸ್ ಸಂಸ್ಥೆಯ ಸಮಾಜಮುಖಿ ಕಾರ್ಯಕ್ಕೆ ನಮ್ಮ ಸಂಸ್ಥೆಯ ಸಹಾಯ ಸಹಕಾರ ಸದಾ ಇರುತ್ತದೆ ಎಂದರು. ನಮ್ಮ ವಿದ್ಯಾರ್ಥಿಗಳಿಗೆ ಈ ಸಂಸ್ಥೆಯ ಸದುಪಯೋಗ ದೊರೆಯಲಿ ಎಂದು ಆಶಿಸಿದರು.

ಸಮಾರಂಭದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ವ್ಯವಸ್ಥಾಪಕರಾದ ರವೀಂದ್ರನಾಥ್ ಆರ್ ವಾದಾಸ್ಕರ್, ಕೌನ್ಸಿಲರ್ ಶಿವಕುಮಾರ್, ರಕ್ತ ನಿಧಿ ಕೇಂದ್ರದ ವಿನಾಯಕ ಆರ್, ದವನ್ ಪದವಿ ಕಾಲೇಜಿನ ಉಪಪ್ರಾಚಾರ್ಯರಾದ ಪ್ರೊ, ಅನಿತಾ ಎನ್ ಶಿಬಿರದ ಉಸ್ತುವಾರಿ ಅಧ್ಯಾಪಕರಾದ ಪ್ರೊ, ಶಂಕರ್ ಬಿ ಸಿ ಹಾಗೂ ಕನ್ನಡ ಉಪನ್ಯಾಸಕರಾದ ಪ್ರೊ, ಕೆ ಕೊಟ್ರಪ್ಪ ಉಪಸ್ಥಿತರಿದ್ದರು. ರಕ್ತದಾನ ಶಿಬಿರದಲ್ಲಿ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಸೇರಿ ಸುಮಾರು ನೂರಕ್ಕೂ ಹೆಚ್ಚು ಜನ ರಕ್ತದಾನ ಮಾಡಿದರು.

# ಬಿ.ಐ.ಇ.ಟಿ.ಯಲ್ಲಿ 'ನಿರ್ಮಾಣ 5.0' ವಿದ್ಯಾರ್ಥಿ ಯೋಜನ ಪ್ರದರ್ಶನ



ದಾವಣಗೆರೆ-ಮೇ.17ರಂದು ಬಿ.ಐ.ಇ.ಟಿ.ಯ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳ 'ನಿರ್ಮಾಣ 5.0' ಯೋಜನಾ ಪ್ರದರ್ಶನ-2025 ಉದ್ಘಾಟಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪೂರೇಶ್ ಪ್ರಸಾದ್ ರಾಜಣ್ಣ, ಸಂಸ್ಥಾಪಕರು ಮತ್ತು ಸಿಇಓ,ಓನ್ ಹೇಚ್ ಬೆಂಗಳೂರು ಇವರು ಕೃತಕ ಬುದ್ದಿಮತ್ತೆ ಎಲ್ಲಾ ಕ್ಷೇತ್ರಗಳನ್ನು ಆವರಿಸಿದ್ದು ಇಂಜಿನಿಯರಿಂಗ್ ವಿನ್ಯಾಸಗಳನ್ನು ಅತಿ ಕಡಿಮೆ ಸಮಯದಲ್ಲಿ ಮಾಡಬಹುದು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ 9 ವಿಭಾಗಗಳ ಸುಮಾರು 60 ಕ್ಕೂ ಹೆಚ್ಚು ವಿದ್ಯಾರ್ಥಿ ಯೋಜನೆಗಳನ್ನು ಪ್ರದರ್ಶಿಸಲಾಯಿತು. ಸುಮಾರು ಮೂರು ಸಾವಿರಕ್ಕು ಹೆಚ್ಚು ವಿವಿಧ ಶಾಲೆಯ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರದರ್ಶನವನ್ನು ವೀಕ್ಷಣೆ ಮಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ನಿರ್ದೇಶಕರಾದ ಪ್ರೊ. ವೈ ವೃಷಭೇಂದ್ರಪ್ಪ, ಪ್ರಾಂಶುಪಾಲರಾದ ಡಾ. ಎಚ್ ಬಿ ಅರವಿಂದ್, ಸಂಚಾಲಕರಾದ ಡಾ. ಎ.ಜಿ.ಶಂಕರಮೂರ್ತಿ ಹಾಗೂ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

# 'ನಿರ್ಮಾಣ': ಯುವ ಪ್ರತಿಭೆಗಳ ಕೌಶಲ್ಯ ಅನಾವರಣ

## ಬಿ.ಐ.ಇ.ಟಿ.ಯಲ್ಲಿ ಸಂಶೋಧನಾ ಪ್ರದರ್ಶನ ಮತ್ತು ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ

ದಾವಣಗೆರೆ, ಮೇ 19- ನಗರದ ತಾಂತ್ರಿಕ ಶಿಕ್ಷಣ ಸಂಸ್ಥೆ ಬಿ.ಐ.ಇ.ಟಿ.ಯ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಶನಿವಾರ ಅಂತಿಮ ವರ್ಷದ ವಿದ್ಯಾರ್ಥಿಗಳ "ನಿರ್ಮಾಣ 5.0 ಯೋಜನಾ ಪ್ರದರ್ಶನ-2025" ಮತ್ತು "ರಾಷ್ಟ್ರೀಯ ತಂತ್ರಜ್ಞಾನ ದಿನ-2025" ರ ಆಚರಣೆ ಸಮಾರಂಭದಲ್ಲಿ ವಿದ್ಯಾರ್ಥಿಗಳ ಕ್ರಿಯಾತ್ಮಕತೆ ಮತ್ತು ತಾಂತ್ರಿಕ ಕೌಶಲ್ಯ ಅನಾವರಣಗೊಂಡಿತು.

ಕಾಲೇಜಿನ ಅಂತಿಮ ವರ್ಷದ 9 ವಿಭಾಗಗಳ 60 ವಿದ್ಯಾರ್ಥಿ ತಂಡಗಳು ತಮ್ಮ ವಿಶಿಷ್ಟ ಯೋಜನೆಗಳ ಮಾದರಿಗಳನ್ನು ಪ್ರದರ್ಶಿಸಿ, ಅವುಗಳ ಕಾರ್ಯನಿರ್ವಹಣೆಯ ಬಗ್ಗೆ ವಿವರಿಸಿದರು.

**ವಕೀಲರಿಗೆ ಎಐ ನೆರವು :** ವಕೀಲರು ದೈನಂದಿನ ದಾಖಲೆಗಳನ್ನು ರೂಪಿಸಲು ನೆರವಾಗುವ ಲೀಗಲೈಸ್ ಎಐ ತಂತ್ರಾಂಶವನ್ನು ವಿದ್ಯಾರ್ಥಿಗಳು ರೂಪಿಸಿದ್ದಾರೆ.

ಎಐ ಆಧಾರಿತ ದಾಖಲೆ ರೂಪಿಸುವ ಈ ತಂತ್ರಾಂಶವು, ಕಾನೂನು ದಾಖಲೆಗಳು ನಿಖರ ಹಾಗೂ ದಕ್ಷವಾಗಿರುವಂತೆ ನೋಡಿಕೊಳ್ಳುತ್ತದೆ. ಸಾಂಪ್ರದಾಯಿಕವಾಗಿ ಇಂತಹ ಕಡತ ರೂಪಿಸುವುದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ ಹಾಗೂ ತಪ್ಪುಗಳಿಗೂ ಅವಕಾಶ ಇರುತ್ತದೆ. ದಾಖಲೆಗಳ ಸ್ವರೂಪ ಏಕರೂಪದಲ್ಲಿ ಇರುವುದಿಲ್ಲ. ಎ.ಐ. ಮೂಲಕ ಈ ಸಮಸ್ಯೆಗಳನ್ನು ಸುಲಭ ಬಗೆಹರಿಸಲು ಸಾಧ್ಯ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಪ್ರೊ. ರಾಧಿಕಾ ಪಾಟೀಲ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ಬಿ.ಬಿ. ಸ್ನೇಹಾ, ಎ. ದಿವ್ಯ, ಜಿ.ಎಂ. ಮನೋಜ್ ಹಾಗೂ ಸಿ.ಎಸ್. ಓಜಸ್ ಅವರು ಈ ತಂತ್ರಾಂಶ ರೂಪಿಸಿದ್ದಾರೆ.

**ಕೃಷಿ ಪರಿಣತಿಗೆ ಎಐ ತಂತ್ರಾಂಶ :** ಕೃಷಿಗೆ ಸಂಬಂಧಿಸಿದಂತೆ ನಿಖರ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾಗುವ ಎಕ್ಸ್‌ಪ್ಲೇನೆಬಲ್ ಎಐ ಮಾದರಿಯನ್ನು ವಿದ್ಯಾರ್ಥಿಗಳು ರೂಪಿಸಿದ್ದಾರೆ.

ಇದರ ಮೂಲಕ ಬೆಳೆಗಳಿಗೆ ತಗುಲುವ ರೋಗಗಳನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಲಿದೆ, ಇದು ರೈತರು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲು ನೆರವಾಗುತ್ತದೆ ಹಾಗೂ ಅತಿಯಾದ ಕ್ರಿಮಿನಾಶಕದ ಬಳಕೆ ತಪ್ಪಿಸುತ್ತದೆ. ಆಧುನಿಕ ಎಐ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಬಳಸಲು ಸಾಧ್ಯವಾಗಲಿದೆ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಡಾ. ಆರ್. ನಸೀರ್ ಅವರ ಮಾರ್ಗದರ್ಶನದಲ್ಲಿ ಸ್ನೇಹಾ, ವಿ.ಎಸ್. ಶಶಿಧರ್ ಹಾಗೂ ಎಸ್.ಬಿ. ಶ್ರೇಯಾ ಅವರು ಈ ಮಾದರಿ ರೂಪಿಸಿದ್ದಾರೆ.

**ಚಹಾ ಪುಡಿಯಿಂದ ಕೆಫೀನ್ ಉತ್ಪಾದನೆ :** ಚಹಾ ಪುಡಿಯಿಂದ ಉತ್ತಮ ಗುಣಮಟ್ಟದ ಕೆಫೀನ್ ಪಡೆಯಲು ಸಾಧ್ಯ ಎಂದು ವಿದ್ಯಾರ್ಥಿಗಳು ಪ್ರಯೋಗದ ಮೂಲಕ ತಿಳಿಸಿದ್ದಾರೆ. ನೀರು ಇಲ್ಲವೇ ಕ್ಲೋರೋಫಾರಂ ಬಳಸಿ ಚಹಾದಿಂದ ಕೆಫೀನ್ ಹೊರತೆಗೆಯಬಹುದು. ಇದು ಕೆಫೀನ್‌ನ ಉತ್ತಮ ಮೂಲವಾಗುವ ಸಾಧ್ಯತೆ ಹೊಂದಿದೆ. ಈ ವಿಧಾನ ಪರಿಣಾಮಕಾರಿ, ದಕ್ಷ ಹಾಗೂ ಸೂಕ್ತವಾಗಿದೆ. ಗುಣ ಹಾಗೂ ಪ್ರಮಾಣ ಎರಡಕ್ಕೂ ಅನ್ವಯವಾಗುತ್ತದೆ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಕೆ.ಜಿ. ಶಶಿಕಲಾ ಅವರ ನೇತೃತ್ವದಲ್ಲಿ ಸಿ. ಮಂಜುಳ, ಎಸ್.ಎಂ.ಕೆ. ಶಾಂತವೀರ್ ಹಾಗೂ ಹೆಚ್.ಎಸ್. ಶ್ರೀನಿಧಿ ಅವರು ಈ ವರದಿ ರೂಪಿಸಿದ್ದಾರೆ.

**ವ್ಯಾಯಾಮ ಮಾಡಿ ವಿದ್ಯುತ್ ಉತ್ಪಾದಿಸಿ:** ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ವಿದ್ಯಾರ್ಥಿಗಳಾದ ಫೈಜಲ್ ಅಹ್ಮದ್, ಆಕಾಶ್, ದಿವಾಕರ್, ಯಾಸ್ಮೀನ್ ಅವರು ಎಸ್.ಕೆ. ಶಿಲ್ಪ ಮಾರ್ಗದರ್ಶನದಲ್ಲಿ "ಪವರ್ ಫ್ರಂ ಏರ್ ವಾಕರ್" ಯೋಜನೆ ತಯಾರಿಸಿದ್ದಾರೆ.

ಏರ್ ವಾಕರ್ ವ್ಯಾಯಾಮ ಸಾಧನವನ್ನು ಬಳಸಿಕೊಂಡು ಮಾನವ ಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ವ್ಯವಸ್ಥೆ ಇದು. ಉದ್ಯಾನವನಗಳಲ್ಲಿ ವ್ಯಾಯಾಮ ಮಾಡುವಾಗ ವ್ಯರ್ಥವಾಗುವ ಮಾನವ ಶಕ್ತಿಯನ್ನು ಬಳಸಿಕೊಳ್ಳುವುದು ಇದರ ಮುಖ್ಯ ಉದ್ದೇಶ. ಉಪಕರಣದ ಚಲನೆಯನ್ನು ತಿರುಗುವಿಕೆಯಾಗಿ ಪರಿವರ್ತಿಸಿ ಇಲ್ಲಿ ವಿದ್ಯುತ್ ಉತ್ಪಾದಿಸಲಾಗುತ್ತದೆ.

ಜನರು ದೈಹಿಕ ಚಟುವಟಿಕೆ ಇಲ್ಲದೆ ಹೆಚ್ಚಿನ ಸಮಯ ಕಳೆಯುತ್ತಿರುವುದರಿಂದ, ವ್ಯಾಯಾಮದ ಮಹತ್ವವನ್ನು ಕಡೆಗಣಿಸುತ್ತಾರೆ. ಏರೋಬಿಕ್ ವ್ಯಾಯಾಮ ಮಾಡಲು ಬಯಸುವವರು ಜಿಮ್ ಅಥವಾ ಪಾರ್ಕ್‌ಗಳಲ್ಲಿ ಗಂಟೆಗಟ್ಟಲೆ ಕಳೆಯುತ್ತಾರೆ, ಆದರೆ ಅದರಿಂದ ಕೇವಲ ಶಾಖ ಉತ್ಪತ್ತಿಯಾಗುತ್ತದೆ. ಏರ್ ವಾಕರ್‌ನಂತಹ ಉಪಕರಣಗಳನ್ನು ಬಳಸುವುದರಿಂದ ವ್ಯಾಯಾಮದ ಜೊತೆಗೆ ವಿದ್ಯುತ್ ಉತ್ಪಾದಿಸಬಹುದು ಎನ್ನುತ್ತಾರೆ ವಿದ್ಯಾರ್ಥಿಗಳು.

**ಪ್ರಯಾಣ ಯೋಜನೆ :** ಪ್ರಯಾಣ ಮಾಡಬೇಕಾದ ಸಮಯದಲ್ಲಿ ಸೂಕ್ತ ಮಾಹಿತಿ ನೀಡಲು ಎಐ ಚಾಲಿತ ಟ್ರಾವೆಲ್ ಪ್ಲಾನರ್ ಅಪ್ಲಿಕೇಶನ್ ಅನ್ನು ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪ್ರದರ್ಶಿಸಿದ್ದರು.

ಸುಧಾರಿತ ಎಐ ಸಾಮರ್ಥ್ಯಗಳನ್ನು ಬಳಸಿ ಬಳಕೆದಾರರಿಗೆ ಉಪಯುಕ್ತವಾದ ಪ್ರಯಾಣ ಯೋಜನೆಗಳನ್ನು ಇದು ಒದಗಿಸುತ್ತದೆ. ಪ್ರಯಾಣಿಕರು ತಲುಪಬೇಕಾದ ಸ್ಥಳ, ಅವಧಿ, ಬಜೆಟ್ ಮುಂತಾದ ಮಾಹಿತಿಯನ್ನು ಪಡೆದು, ದಿನನಿತ್ಯದ ವಿವರವಾದ ಯೋಜನೆ, ಊಟದ ಸಲಹೆಗಳು, ವೆಚ್ಚದ ಮಾಹಿತಿ ಮತ್ತು ಸ್ಥಳೀಯ ಮಾರ್ಗದರ್ಶಕರ ಸಂಪರ್ಕದಂತಹ ವೈಶಿಷ್ಟ್ಯಗಳನ್ನು ಈ ಅಪ್ಲಿಕೇಶನ್ ನೀಡುತ್ತದೆ. ಪ್ರೊ. ವಿಶ್ವನಾಥ್ ಪಿ.ಕೆ. ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ (5ನೇ ಪುಟಕ್ಕೆ)

### ಚರ್ಮ ರಕ್ಷಣೆಗೆ ಮಾವಿನ ಕ್ರೀಮ್

ಚರ್ಮ ರಕ್ಷಣೆಗೆ ಕ್ರೀಮ್‌ಗಳ ಬೇಡಿಕೆ ಇತ್ತೀಚೆಗೆ ಹೆಚ್ಚಾಗಿದೆ. ಹೀಗಾಗಿ ಮಾವಿನ ಓಟೆ ಬಳಸಿಕೊಂಡು ಕ್ರೀಮ್ ಅನ್ನು ವಿದ್ಯಾರ್ಥಿಗಳು ರೂಪಿಸಿದ್ದಾರೆ. ಇದು ಚರ್ಮವನ್ನು ರಕ್ಷಿಸುವ ಜೊತೆಗೆ, ಹೆಚ್ಚು ಕಾಲ ಚರ್ಮ ಯುವ ಆಗಿರುವಂತೆ ನೋಡಿಕೊಳ್ಳುತ್ತದೆ. ಮಾವಿನ ಓಟೆಯ ತೈಲ ಹಾಗೂ ಬೆಣ್ಣೆ ಉತ್ಪನ್ನಗಳನ್ನು ಬಳಸಿ ಚರ್ಮ ರಕ್ಷಣೆ ಸಾಧ್ಯವೆಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಡಾ. ಎನ್.ಎಸ್. ಮಂಜುನಾಥ್ ಅವರ ನೇತೃತ್ವದಲ್ಲಿ ಎಸ್. ದೀಪಿಕ ಹಾಗೂ ಎ.ಎನ್. ಅಮೃತ ಈ ವರದಿ ರೂಪಿಸಿದ್ದಾರೆ.



"ನಿರ್ಮಾಣ 5.0 ಯೋಜನಾ ಪ್ರದರ್ಶನ-2025" ಮತ್ತು "ರಾಷ್ಟ್ರೀಯ ತಂತ್ರಜ್ಞಾನ ದಿನ-2025" ಕಾರ್ಯಕ್ರಮದಲ್ಲಿ ಬೆಂಗಳೂರಿನ 1 ಹೆಚ್ ಸಂಸ್ಥೆಯ ಸಿ.ಇ.ಒ. ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿ ಪೂರಣ ಪ್ರಸಾದ್ ರಾಜಣ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.
ಬಿ.ಐ.ಇ.ಟಿ. ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲರಾದ ಡಾ. ಎಚ್. ಬಿ. ಅರವಿಂದ ಮತ್ತು ನಿರ್ಮಾಣ 5.0 ರ ಸಂಚಾಲಕರಾದ ಡಾ. ಎ. ಜಿ. ಶಂಕರಮೂರ್ತಿ ಉಪಸ್ಥಿತರಿದ್ದರು.

# ಯುವ ಪ್ರತಿಭೆಗಳ ಕೌಶಲ್ಯ ಅನಾವರಣ

(4ನೇ ಪುಟದಿಂದ) ಸೃಷ್ಟಿ ಚೌಧರಿ, ಸಿದ್ದೇಶ್ ಎನ್.ಡಿ, ಸುಹಾಸ್ ಮಾಲಿಪಾಟೀಲ್, ವರ್ಷ ಪಿ.ಎಸ್. ಈ ಯೋಜನೆ ರೂಪಿಸಿದ್ದಾರೆ.

**ಮುಟ್ಟಿದರೆ ಮುನಿಯಲ್ಲ, ಗಾಯ ವಾಸಿ:** ಗ್ರಾಮೀಣ ಪ್ರದೇಶದಲ್ಲಿ ಸುಲಭವಾಗಿ ಕಾಣ ಸಿಗುವ ಮುಟ್ಟಿದರೆ ಮುನಿ ಸಸಿಯಿಂದ ಔಷಧ ತಯಾರಿಸಬಹುದು ಎನ್ನುತ್ತಾರೆ ಬಯೋಟೆಕ್ನಾಲಜಿ ವಿದ್ಯಾರ್ಥಿಗಳಾದ ವೀಕ್ಷಾ ಕೆ.ವಿ., ಗ್ಲಾಡೀಸ್ ಸೋನಿಯಾ, ಸುಧಾ ಕೊಪ್ಪದ್.

ಮುಟ್ಟಿದರೆ ಮುನಿ (ಮಿಮೋಸಾ ಪುಡಿಕಾ) ಎಲೆಗಳ ಮೆಥನಾಲ್ ಸಾರವನ್ನು ಜೇನುಮೇಣ ಮತ್ತು ತೆಂಗಿನ ಎಣ್ಣೆಯೊಂದಿಗೆ ಬೆರೆಸಿ ಮುಲಾಮು ತಯಾರಿಸಲಾಗಿತ್ತು. ಇದು ಸುರಕ್ಷಿತ ಗಿಡಮೂಲಿಕೆ ಉತ್ಪನ್ನ ಎನ್ನುತ್ತಾರೆ ವಿದ್ಯಾರ್ಥಿಗಳು. ಇವರಿಗೆ ಮಾರ್ಗದರ್ಶಕರಾಗಿದ್ದವರು ಪ್ರೊ.ಎಂ.ಬಿ. ಮಾನಸ.

**ಅನಾನಸ್ ಸಿಪ್ಪೆ ಹಾಗೂ ಅಗ್ನಿ ನಿರೋಧಕ:** ಸಿಟ್ರಿಕ್ ಆಮ್ಲ (ಸುಕ್ಕು ನಿವಾರಕ), ಸೋಡಿಯಂ ಹೈಪೋಫಾಸ್ಫೇಟ್ (ವೇಗವರ್ಧಕ) ಮತ್ತು ಅನಾನಸ್ ಸಿಪ್ಪೆ (ಜ್ವಾಲೆ ನಿರೋಧಕ) ಯಂತಹ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಿ ಹತ್ತಿ ಬಟ್ಟೆಗಳ ಸುಕ್ಕು ನಿರೋಧಕ ಮತ್ತು ಜ್ವಾಲೆ ನಿರೋಧಕ ಗುಣಗಳನ್ನು ಹೆಚ್ಚಿಸುವ ಯೋಜನೆಯನ್ನು ಸೃಜನ್, ಸ್ಮಿತಾ, ಶ್ರೀತೇಜ್ ಆರ್.ಕಂಡಕುರ್ ಅವರು ಡಾ.ದಿನೇಶ್ ವೈ. ಎಸ್. ಮಾರ್ಗದರ್ಶನದಲ್ಲಿ ರೂಪಿಸಿದ್ದುದು ಗಮನ ಸೆಳೆಯಿತು. ಅನುಪಯುಕ್ತ ಅನಾನಸ್ ಸಿಪ್ಪೆ ಬಳಸಿದ ಬಟ್ಟೆಗಳಲ್ಲಿ ಅಗ್ನಿ ನಿರೋಧಕತೆ ಗುಣ ಇರುತ್ತದೆ ಎನ್ನುತ್ತಾರೆ ವಿದ್ಯಾರ್ಥಿಗಳು.

**ಸ್ಮಾರ್ಟ್ ಟೊಮೆಟೊ ಸಂರಕ್ಷಣಾ ವ್ಯವಸ್ಥೆ:** ಸ್ಮಾರ್ಟ್ ಟೊಮೆಟೊ ಸಂರಕ್ಷಣಾ ವ್ಯವಸ್ಥೆಯು ಟೊಮ್ಯಾಟೋಗಳ ಜೀವಿತಾವಧಿಯನ್ನು ಹೆಚ್ಚಿಸಲು ಮತ್ತು ಕೊಯ್ಲಿನ ನಂತರದ ನಷ್ಟವನ್ನು ಕಡಿಮೆ ಮಾಡಲು ವಿನ್ಯಾಸಗೊಳಿಸಲಾದ ತಂತ್ರಜ್ಞಾನ-ಚಾಲಿತ ಪರಿಹಾರವಾಗಿತ್ತು.

ಸಮಾನ್ಯವಾಗಿ ಟೊಮ್ಯಾಟೋ ಕಾಯಿ ಹಣ್ಣಾಗಲು 6-7 ದಿಗನಳು ಬೇಕಾಗುತ್ತದೆ. ಆದರೆ ಮಣ್ಣಿನಿಂದ ಮಾಡಿದ ಪಿರಮಿಡ್‌ನಲ್ಲಿ ಧ್ವನಿ ತರಂಗಗಳ ಬಳಕೆ ಹಾಗೂ ಬೆಳಕಿನ ಚಿಕಿತ್ಸೆಯಿಂದ 30 ದಿನಗಳವರೆಗೆ ಹಣ್ಣು ಸಂಗ್ರಹಿಸಬಹುದು ಎನ್ನುತ್ತಾರೆ ವಿದ್ಯಾರ್ಥಿಗಳು. ಡಾ. ಮಾನವೇಂದ್ರ, ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ರಕ್ಷಿತ್, ಮಧು, ನಿಖಿತ್, ಯಶವಂತ್ ಈ ಮಾದರಿ ರೂಪಿಸಿದ್ದಾರೆ.

ಕೆ.ಎಸ್.ಸಿ.ಎಸ್.ಟಿ., ಎನ್.ಎ.ಐ.ಎನ್. ಮತ್ತು ಬಿ.ಐ.ಇ.ಟಿ. ಪ್ರಾಯೋಜಿತ ಯೋಜನೆಗಳಲ್ಲಿ "ಅತ್ಯುತ್ತಮ ನವೀನ ಯೋಜನೆ", "ಸಾಮಾಜಿಕ ಕಳಕಳಿಯಿರುವ ಅತ್ಯುತ್ತಮ ಯೋಜನೆ" ಮತ್ತು "ವಿಭಾಗದ ಅತ್ಯುತ್ತಮ ಯೋಜನೆ" ಎಂಬ ಮೂರು ವಿಭಾಗಗಳಲ್ಲಿ ಅತ್ಯುತ್ತಮ ಯೋಜನೆಗಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು.

ನೀಡಿದರು. ತಡವಾಗಿ ಭಾರತ ರತ್ನ ನೀಡಿ ಪೀಠದ ಬಸವ ಜಯಮೃತ್ಯುಂಜಯ ಮಾತನಾಡಿದರು.

### ‘ರಾಷ್ಟ್ರೀಯ ತಂತ್ರಜ್ಞಾನ ದಿನ’: ಬಿಐಇಟಿಯಲ್ಲಿ ‘ನಿರ್ಮಾಣ’ ವಸ್ತುಪ್ರದರ್ಶನ

# ಕುತೂಹಲ ಕೆರಳಿಸಿದ ತಾಂತ್ರಿಕ ಮಾದರಿಗಳು

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ‘ಅತಿ ಬೇಗ ಹಾಳಾಗುವ ಟೊಮೆಟೊವನ್ನು ಹೆಚ್ಚು ಕಾಲ ಸಂರಕ್ಷಿಸುವುದು ಹೇಗೆ? ಬೆಳೆಗಳಲ್ಲಿ ಕಾಣಿಸಿಕೊಂಡ ಕೀಟಬಾಧೆಯನ್ನು ನಿಯಂತ್ರಿಸಲು ಏನು ಮಾಡಬೇಕು? ಮುಟ್ಟಿದರೆ ಮುನಿ ಕಳೆಯಲ್ಲಿ ಗಾಯ ಗುಣಪಡಿಸುವ ಔಷಧೀಯ ಅಂಶ ಇದೆಯೇ?

ಇಂತಹ ಹಲವು ಪ್ರಶ್ನೆಗಳಿಗೆ ಬಿಐಇಟಿಯ ಕೌಶಲ ಅಭಿವೃದ್ಧಿ ಕೇಂದ್ರದಲ್ಲಿ ಶನಿವಾರ ಏರ್ಪಡಿಸಿದ್ದ ವಸ್ತುಪ್ರದರ್ಶನ ಉತ್ತರ ನೀಡಿತು. ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ‘ನಿರ್ಮಾಣ’ ವಸ್ತುಪ್ರದರ್ಶನದಲ್ಲಿ ಕಾಲೇಜಿನ 9 ವಿಭಾಗದ 60 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳ ತಾಂತ್ರಿಕ ಆವಿಷ್ಕಾರ ಕುತೂಹಲ ಕೆರಳಿಸಿತು.

ಟೊಮೊಟೊ ಅತಿ ಬೇಗ ಕೆಡುವ ತರಕಾರಿ. ಇದರ ಸಂರಕ್ಷಣೆ ಅಷ್ಟು ಸುಲಭವೇನೂ ಅಲ್ಲ. ಇದೇ ಕಾರಣಕ್ಕೆ ಟೊಮೆಟೊ ಬೆಲೆ ಮಾರುಕಟ್ಟೆಯಲ್ಲಿ ಸಾಕಷ್ಟು ಏರಿಳಿತ ಕಾಣುತ್ತದೆ. ವಿದ್ಯಾರ್ಥಿಗಳ ತಂಡವೊಂದು ರೂಪಿಸಿದ ‘ಸ್ಮಾರ್ಟ್ ಟೊಮೆಟೊ ಸಂರಕ್ಷಣಾ ವ್ಯವಸ್ಥೆ’ಯ ಮಾದರಿ ಗಮನ ಸೆಳೆಯಿತು.

ಟೊಮೆಟೊ ಹಣ್ಣಾಗಲು 6ರಿಂದ 7 ದಿನ ಬೇಕಾಗುತ್ತದೆ. ಮಣ್ಣಿನಿಂದ ಮಾಡಿದ ಪಿರಾಮಿಡ್ ಆಕೃತಿಯ ಪರಿಕರದಲ್ಲಿ ಧ್ವನಿ ಮತ್ತು ಬೆಳಕು ಬಳಸಿಕೊಂಡು 30 ದಿನಗಳವರೆಗೆ ಹಣ್ಣು ಸಂಗ್ರಹಿಸಿಡಲು ಸಾಧ್ಯವಿದೆ ಎಂಬುದನ್ನು ಈ ಮಾದರಿ ತೋರಿಸಿದೆ.

ಕೃಷಿ ಬೆಳೆಗಳಲ್ಲಿ ಕಾಣಿಸಿಕೊಂಡು ಕೀಟಬಾಧೆ, ರೋಗಗಳನ್ನು ನಿಖರವಾಗಿ ಪತ್ತೆ ಮಾಡಲು ವಿದ್ಯಾರ್ಥಿಗಳ ತಂಡ ಕೃತಕ ಬುದ್ಧಿಮತ್ತೆಯೊಂದಿಗೆ ತಂತ್ರಾಂಶವೊಂದನ್ನು ಅಭಿವೃದ್ಧಿಪಡಿಸಿದೆ. ಇದರಿಂದ ಹೆಚ್ಚು ಕೀಟನಾಶಕ ಬಳಕೆಯನ್ನು ತಡೆಗಟ್ಟಲು ಸಾಧ್ಯವಿದೆ ಎಂಬುದು ಈ ಮಾದರಿಯ ಆಶಯ.

ಜಿಮ್ ಮತ್ತು ಉದ್ಯಾನಗಳಲ್ಲಿ ಮಾಡುವ ವ್ಯಾಯಾಮದಿಂದಲೂ ವಿದ್ಯುತ್ ಉತ್ಪಾದನೆ ಮಾಡಬಹುದು ಎಂಬುದನ್ನು ‘ಪವರ್ ಫ್ರಂ ಏರ್ ವಾಕರ್’ ಎಂಬ ಮಾದರಿ ನಿರೂಪಿಸಿದೆ. ಉಪಕರಣಗಳ ಚಲನೆಯಲ್ಲಿ ಸೃಷ್ಟಿಯಾಗುವ ಶಕ್ತಿಯಿಂದ ವಿದ್ಯುತ್ ಉತ್ಪಾದಿಸಲಾಗಿದೆ.

ಮುಟ್ಟಿದರೆ ಮುನಿ ಕಳೆಗಿಡದಿಂದ ತಯಾರಿಸಿದ ಔಷಧ, ವಕೀಲರು ದಾಖಲೆಗಳನ್ನು ಸೃಜಿಸಲು ನೆರವಾಗುವ ಕೃತಕ ಬುದ್ಧಿಮತ್ತೆ, ಅನಾನಸ್ ಹಣ್ಣಿನ ಸಿಪ್ಪೆಯನ್ನು ಅಗ್ನಿನಿವಾರಕವಾಗಿ ಬಳಕೆ ಮಾಡುವ ರೀತಿಯನ್ನು ವಿವಿಧ ಮಾದರಿಗಳು ತೋರಿಸಿಕೊಟ್ಟವು.

‘1 ಪೇಜ್’ ಸಂಸ್ಥಾಪಕ ಪೂರ್ಣ ಪ್ರಸಾದ್ ರಾಜಣ್ಣ, ಕಾಲೇಜಿನ ನಿರ್ದೇಶಕ ವೈ.ವೃಷಭೇಂದ್ರಪ್ಪ, ಪ್ರಾಂಶುಪಾಲ ಎಚ್.ಬಿ.ಅರವಿಂದ್, ಪ್ರಾಧ್ಯಾಪಕ ಎ.ಜಿ. ಶಂಕರಮೂರ್ತಿ ಹಾಜರಿದ್ದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಿದ್ದ ವಸ್ತುಪ್ರದರ್ಶನವನ್ನು ಗಣ್ಯರು ವೀಕ್ಷಿಸಿದರು —ಪ್ರಜಾವಾಣಿ ಚಿತ್ರ